# ಕರ್ನಾಟಕ ಸರ್ಕಾರದ ನಡವಳಿ

**ವಿಷಯ :** ಶ್ರೀ ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದ ಅವಧಿಯಲ್ಲಿ ಮಾನ್ಯ ಉಪಲೋಕಾಯುಕ್ತರ ಅಂತಿಮ ವರದಿ ದಂಡನಾ ಆದೇಶ ಹೊರಡಿಸುವ ಕುರಿತು.

**ಓದಲಾಗಿದೆ :**

1. ಅಪರ ನಿಬಂಧಕರು (ವಿಚಾರಣೆಗಳು–4)(ಪ್ರಭಾರ), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ಅ.ಸ.ಪ. ಸಂಖ್ಯೆ: ಕಂಪ್ಲೇಂಟ್/ಉಪಲೋಕ್/ಜಿಎಲ್‌ಬಿ/100/2004/ಎಆರ್‌ಇ–4, ದಿನಾಂಕ:20.03.2015.
2. ಸರ್ಕಾರದ ಆದೇಶ ಸಂಖ್ಯೆ : ಗ್ರಾಅಪ 39 ಇಎನ್‌ಕ್ಯೂ 2015, ದಿನಾಂಕ 20.04.2015
3. ವಿಚಾರಣಾಧಿಕಾರಿಗಳು ಹಾಗೂ ಅಪರ ನಿಬಂಧಕರು (ವಿಚಾರಣೆಗಳು–9), ಕರ್ನಾಟಕ ಲೋಕಾಯುಕ್ತ, ಬೆಂಗಳೂರು ರವರ ವಿಚಾರಣಾ ವರದಿ ಸಂಖ್ಯೆ: ಉಪಲೋಕ್–1/ಡಿಇ/224/2015/ಎಆರ್‌ಇ–9, ದಿನಾಂಕ:12.09.2019.
4. ಮಾನ್ಯ ಉಪಲೋಕಾಯುಕ್ತರು–1 ರವರ ಶಿಫಾರಸ್ಸು ಸಂಖ್ಯೆ : ಉಪಲೋಕ್–1/ಡಿಇ/224/2015/ಎಆರ್‌ಇ–9, ದಿನಾಂಕ:16.09.2019.
5. ಸರ್ಕಾರದ ಸಮಸಂಖ್ಯೆ ದಿನಾಂಕ 30.10.2019ರ 2ನೇ ಕಾರಣ ಕೇಳುವ ನೋಟೀಸು.

******

**ಪ್ರಸ್ತಾವನೆ:–**

ಮೇಲೆ ಓದಲಾದ ಕ್ರಮಾಂಕ (1)ರಲ್ಲಿ ಅಪರ ನಿಬಂಧಕರು ವಿಚಾರಣೆಗಳು–4 (ಪ್ರಭಾರ), ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರು ದಿ:20.03.2015ರ ಪ್ರಸ್ತಾವನೆಯಲ್ಲಿ ಕರ್ನಾಟಕ ಲೋಕಾಯುಕ್ತ ಕಾಯ್ದೆ 1984ರ ಕಲಂ 12(3)ರ ಅನ್ವಯ ಸಲ್ಲಿಸಿರುವ ವರದಿಯಲ್ಲಿ ಎಸ್‌ಜಿಆರ್‌ವೈ ಯೋಜನೆಯಡಿಯ ಕಾಮಗಾರಿಗಳ ಅನುಷ್ಠಾನದಲ್ಲಿ ಹಣ ದುರುಪಯೋಗ ಮತ್ತು ನಿಯಮಗಳ ಉಲ್ಲಂಘನೆಗಳಿಗೆ ಸಂಬಂಧಿಸಿದ ಈ ಪ್ರಕರಣದಲ್ಲಿ 1. ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ. 2. ಶ್ರೀ ನಾರಾಯಣ ನಾಯಕ್, ಕಿರಿಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪವಿಭಾಗ, ರಾಯಚೂರು ಜಿಲ್ಲೆ ಇವರುಗಳ ವಿರುದ್ಧ ಶ್ರೀ ಚಂದ್ರಶೇಖರ್ ತಂದೆ ವೇಣಪ್ಪ, ಬಂಡೆಗುಡ್ಡ ಗ್ರಾಮ, ದೇವದುರ್ಗ ತಾಲ್ಲೂಕು ಇವರು ಸದರಿ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಸ್‌ಜಿಆರ್‌ವೈ ಯೋಜನೆಯಡಿ ಭೀಮಾನಾಯಕ ತಾಂಡಾದ ಡ್ರೈನೇಜ್ ಕಾಮಗಾರಿ ಉಲ್ಕಾಬಂಡಾ ತಾಂಡಾದಲ್ಲಿ ಶಾಲೆಯ ಬಿಸಿಯೂಟದ ಅಡಿಗೆಮನೆ ಕಟ್ಟಡ ನಿರ್ಮಾಣ ಕಾಮಗಾರಿ ಹಾಗೂ ಸಿಂಗೇರಿದೊಡ್ಡಿ ಗ್ರಾಮದಲ್ಲಿ ಶಾಲೆಯ ಅಡುಗೆಯವರ ಸಂಬಳ ಕೊಡದೆ ಮೋಸ ಮಾಡಿರುತ್ತಾರೆಂದು ಸಲ್ಲಿಸಿದ ದೂರಿನ ಅನ್ವಯ ತನಿಖೆ ನಡೆಸಿ ತನಿಖಾ ವರದಿಯೊಂದಿಗೆ ಆಪಾದಿತ ನೌಕರರ ಮೇಲಿನ ಆರೋಪಗಳು ಮೇಲ್ನೋಟಕ್ಕೆ ರುಜುವಾತಾಗಿದ್ದು, ಪ್ರಕರಣದ ಸತ್ಯಾಸತ್ಯತೆಯನ್ನು ತಿಳಿಯಲು ಪ್ರಕರಣವನ್ನು ಮಾನ್ಯ ಉಪಲೋಕಾಯುಕ್ತರವರಿಗೆ ಇಲಾಖಾ ವಿಚಾರಣೆಗೆ ವಹಿಸುವಂತೆ ಕೋರಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (2)ರಲ್ಲಿ ಸರ್ಕಾರವು ಮಾನ್ಯ ಉಪಲೋಕಾಯುಕ್ತರು, ಕರ್ನಾಟಕ ಲೋಕಾಯುಕ್ತ ಬೆಂಗಳೂರು ರವರ ವರದಿ ಹಾಗೂ ದಾಖಲೆಗಳನ್ನು ಪರಿಶೀಲಿಸಿ ಆಪಾದಿತ ನೌಕರರ ಮೇಲಿನ ಆರೋಪಗಳ ಕುರಿತು ಪ್ರಕರಣಗಳ ಸತ್ಯಾಸತ್ಯತೆಯನ್ನು ತಿಳಿಯಲು ಪ್ರಕರಣವನ್ನು ಇಲಾಖಾ ವಿಚಾರಣೆ ನಡೆಸಲು ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ನಿಯಮ 14(ಎ) ರಡಿ ಪ್ರಕರಣವನ್ನು ಇಲಾಖಾ ವಿಚಾರಣೆಗೆ ಮಾನ್ಯ ಉಪಲೋಕಾಯುಕ್ತರಿಗೆ ವಹಿಸಿ ಆದೇಶಿಸಲಾಗಿದೆ.

ಮೇಲೆ ಓದಲಾದ ಕ್ರಮಾಂಕ (3)ರಲ್ಲಿ ವಿಚಾರಣಾಧಿಕಾರಿಗಳು ಪ್ರಕರಣದ ಪೂರ್ಣ ಪ್ರಮಾಣದ ವಿಚಾರಣೆಯನ್ನು ನಡೆಸಿ ದಿನಾಂಕ 12.09.2019 ರಂದು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿರುವ ವಿಚಾರಣಾ

ವರದಿಯಲ್ಲಿ ಆಪಾಧಿತ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಸ್‌ಜಿಆರ್‌ವೈ ಯೋಜನೆಯಡಿ ಭೀಮಾನಾಯಕ ತಾಂಡಾದ ಡ್ರೈನೇಜ್ ಕಾಮಗಾರಿ ಉಲ್ಕಾಬಂಡಾ ತಾಂಡಾದಲ್ಲಿ ಶಾಲೆಯ ಬಿಸಿಯೂಟದ ಅಡಿಗೆಮನೆ ಕಟ್ಟಡ ನಿರ್ಮಾಣ ಕಾಮಗಾರಿ ಹಾಗೂ ಸಿಂಗೇರಿದೊಡ್ಡಿ ಗ್ರಾಮದಲ್ಲಿ ಶಾಲೆಯ ಅಡುಗೆಯವರ ಸಂಬಳ ಕೊಡದೆ ಆಪಾಧಿತ ನೌಕರ ಶ್ರೀ ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರು ರೂ. 59,719/–ಗಳನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯಲೋಪವೆಸಗಿರುವ ಆರೋಪವು ರುಜುವಾತಾಗಿರುವುದಾಗಿ ತಿಳಿಸಿರುತ್ತಾರೆ. ಮತ್ತು ಶ್ರೀ ನಾರಾಯಣ ನಾಯಕ, ಕಿರಿಯ ಇಂಜಿನಿಯರ್, ದೇವದುರ್ಗ ಉಪವಿಭಾಗ ಇವರು ದಿ:26.01.2015 ರಂದು ಮರಣ ಹೊಂದಿರುವುದರಿಂದ ಅವರ ಮೇಲಿನ ವಿಚಾರಣೆಯಿಂದ ರದ್ದುಪಡಿಸಿ (Abatement) ಎಂದು ಮತ್ತು ಶ್ರೀ ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ. ಇವರ ವಿರುದ್ಧದ ಆರೋಪಗಳು ರುಜುವಾತಾಗಿರುವುದಾಗಿ ವರದಿ ಸಲ್ಲಿಸಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (4)ರಲ್ಲಿ ಮಾನ್ಯ ಉಪಲೋಕಾಯುಕ್ತರು ಆಪಾಧಿತ ನೌಕರ ಶ್ರೀ ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರು ರೂ. 59,719/–ಗಳನ್ನು ದುರುಪಯೋಗಪಡಿಸಿಕೊಂಡು ಕರ್ತವ್ಯಲೋಪವೆಸಗಿರುವ ಆರೋಪವು ರುಜುವಾತಾಗಿರುವುದಾಗಿ ತಿಳಿಸಿರುತ್ತಾರೆ. ಮತ್ತು ಶ್ರೀ ನಾರಾಯಣ ನಾಯಕ, ಕಿರಿಯ ಇಂಜಿನಿಯರ್, ದೇವದುರ್ಗ ಉಪವಿಭಾಗ ಇವರು ದಿ:26.01.2015 ರಂದು ಮರಣ ಹೊಂದಿರುವುದರಿಂದ ಅವರ ಮೇಲಿನ ವಿಚಾರಣೆಯಿಂದ ರದ್ದುಪಡಿಸಿ (Abatement) ಎಂದು ಮತ್ತು ಶ್ರೀ ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ. ಇವರ ವಿರುದ್ಧದ ಆರೋಪಗಳು ರುಜುವಾತಾಗಿರುವುದಾಗಿ ಸದರಿಯವರು ದಿನಾಂಕ 30.11.2017 ರಂದು ಸರ್ಕಾರಿ ಸೇವೆಯಿಂದ ವಯೋನಿವೃತ್ತಿ ಹೊಂದಿರುವುದರಿಂದ ಇವರಿಂದ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ. 59,719/–ಗಳನ್ನು ಅವರ ಪಿಂಚಣಿ ಮತ್ತು ಉಪಧಾನಗಳಿಂದ ವಸೂಲಿ ಮಾಡುವಂತೆ ಶಿಫಾರಸ್ಸು ಮಾಡಿರುತ್ತಾರೆ.

ಮೇಲೆ ಓದಲಾದ ಕ್ರಮಾಂಕ (5)ರಲ್ಲಿ ಆಪಾಧಿತ ಸರ್ಕಾರಿ ನೌಕರ ಶ್ರೀ ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರಿಗೆ ಅಪರ ನಿಬಂಧಕರು, ವಿಚಾರಣೆಗಳು–9 ರವರು ದಿನಾಂಕ 12.09.2019 ರಂದು ಮಾನ್ಯ ಉಪಲೋಕಾಯುಕ್ತರಿಗೆ ಸಲ್ಲಿಸಿರುವ ವಿಚಾರಣಾ ವರದಿ ಮತ್ತು ಮಾನ್ಯ ಉಪಲೋಕಾಯುಕ್ತರು ದಿನಾಂಕ 16.09.2019 ರಂದು ಮಾಡಿರುವ ಶಿಫಾರಸ್ಸಿನ ಪ್ರತಿಗಳೊಂದಿಗೆ ಸಮಸಂಖ್ಯೆಯ ದಿನಾಂಕ 30.10.2019 ರಂದು 2ನೇ ಕಾರಣ ಕೇಳುವ ನೋಟೀಸನ್ನು ಜಾರಿಗೊಳಿಸಲಾಗಿದೆ.

ಆಪಾಧಿತ ನೌಕರರು ದಿನಾಂಕ 30.10.2019 ರಂದು ಜಾರಿಗೊಳಿಸಲಾದ 2ನೇ ಕಾರಣ ಕೇಳುವ ನೋಟೀಸನ್ನು ದಿನಾಂಕ 21.11.2019ರಂದು ಸ್ವೀಕರಿಸಿರುತ್ತಾರೆ. ಸದರಿ ನೋಟೀಸಿಗೆ ಯಾವುದೇ ಲಿಖಿತ ಸಮಜಾಯಿಷಿ/ ಉತ್ತರ ಸಲ್ಲಿಸಿರುವುದಿಲ್ಲ.

ಹಾಗಾಗಿ ಆಪಾಧಿತ ನೌಕರರು ಯಾವುದೇ ಲಿಖಿತ ಸಮಜಾಯಿಷಿಯನ್ನು ಸಲ್ಲಿಸದೇ ಇರುವುದರಿಂದ ಮಾನ್ಯ ಉಪಲೋಕಾಯುಕ್ತರು ಶಿಫಾರಸ್ಸು ಮಾಡಿರುವಂತೆ ಆಪಾಧಿತ ನೌಕರರಿಗೆ ಕರ್ನಾಟಕ ಸಿವಿಲ್ ಸೇವಾ ನಿಯಮ 214(1)(ಬಿ)ರನ್ವಯ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ. 59,719/– ಗಳನ್ನು ಅವರ ಪಿಂಚಣಿ ಉಪದಾನಗಳಿಂದ ತಡೆಹಿಡಿಯುವ ದಂಡನೆ ವಿಧಿಸಲು ತೀರ್ಮಾನಿಸಿದೆ. ಅದರಂತೆ ಈ ಕೆಳಕಂಡ ಆದೇಶ.

**ಸರ್ಕಾರದ ಆದೇಶ ಸಂಖ್ಯೆ: ಗ್ರಾಅಪ/448/ಗ್ರಾಪಂಕಾ/2019, ಬೆಂಗಳೂರು, ದಿನಾಂಕ: 16ನೇ ಆಗಸ್ಟ್ 2022.**

ಪ್ರಸ್ತಾವನೆಯಲ್ಲಿ ವಿವರಿಸಲಾದ ಅಂಶಗಳ ಹಿನ್ನೆಲೆಯಲ್ಲಿ ಶ್ರೀ ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರ ವಿರುದ್ಧದ ಆರೋಪಗಳು ರುಜುವಾತಾಗಿರುವುದರಿಂದ ಕರ್ನಾಟಕ ಸಿವಿಲ್ ಸೇವಾ ನಿಯಮ 214(1)(ಬಿ)ರನ್ವಯ ಸರ್ಕಾರಕ್ಕೆ ಉಂಟಾಗಿರುವ ಆರ್ಥಿಕ ನಷ್ಟ ರೂ. 59,719/– ಗಳನ್ನು ಅವರ ಪಿಂಚಣಿ ಉಪದಾನಗಳಿಂದ ತಡೆಹಿಡಿಯುವ ದಂಡನೆ ವಿಧಿಸಿ ಆದೇಶಿಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

B. Naveenkumar 16/8/22
(ನವೀನ್ ಕುಮಾರ್ ಬಿ.)
ಉಪನಿರ್ದೇಶಕರು ಹಾಗೂ ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ(ಗ್ರಾ.ಪಂ)
ಗ್ರಾಮೀಣಾಭಿವೃದ್ಧಿ ಮತ್ತು ಪಂ.ರಾಜ್ ಇಲಾಖೆ.

16/8/22

ಇವರಿಗೆ:–

1) ಮಹಾಲೇಖಪಾಲರು, ಕರ್ನಾಟಕ, ಬೆಂಗಳೂರು.
2) ಮಾನ್ಯ ಉಪಲೋಕಾಯುಕ್ತರು–1, ಕರ್ನಾಟಕ, ಬಹುಮಹಡಿ ಕಟ್ಟಡ, ಬೆಂಗಳೂರು.
3) ನಿಬಂಧಕರು, ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು
4) ಅಪರ ನಿಬಂಧಕರು(ವಿಚಾರಣೆಗಳು–9), ಕರ್ನಾಟಕ ಲೋಕಾಯುಕ್ತ, ಬಹುಮಹಡಿ ಕಟ್ಟಡ, ಬೆಂಗಳೂರು
5) ಮುಖ್ಯ ಕಾರ್ಯನಿರ್ವಹಣಾಧಿಕಾರಿ, ಜಿಲ್ಲಾ ಪಂಚಾಯಿತಿ, ರಾಯಚೂರು ಜಿಲ್ಲೆ.
6) ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ.
7) ಶ್ರೀ ಹನುಮಂತಪ್ಪ ಉಪ್ಪಾರ್, ಅಂದಿನ ಗ್ರಾಮ ಪಂಚಾಯಿತಿ ಕಾರ್ಯದರ್ಶಿ, ಕ್ಯಾದಿಗೇರಾ ಗ್ರಾಮ ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ. **ಇವರಿಗೆ (ಕಾರ್ಯನಿರ್ವಹಣಾಧಿಕಾರಿ, ತಾಲ್ಲೂಕು ಪಂಚಾಯಿತಿ, ದೇವದುರ್ಗ ತಾಲ್ಲೂಕು, ರಾಯಚೂರು ಜಿಲ್ಲೆ ಇವರ ಮುಖಾಂತರ)**
8) ನಿರ್ದೇಶಕರು (ಇ–ಆಡಳಿತ), ಇಲಾಖಾ ವೆಬ್–ಸೈಟಿನಲ್ಲಿ ಪ್ರಕಟಿಸಲು.
9) ಶಾಖಾ ರಕ್ಷಾ ಕಡತ / ಹೆಚ್ಚುವರಿ ಪ್ರತಿಗಳು.